ತಾರೀಖು 11ನೆ ಜನವರಿ 1907.

ನಂ. 6215—ಸ್ಯಾನಿಟರಿ 139-06-8, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

| ಸ್ಥಳ. | ತಾಲ್ಲೂಕು. |
|---|---|
| ಎಡಿಯೂರು ... ... | ಬೆಂಗಳೂರು |
| ಜಕ್ಕೂರು ... ... | ಡಿಟೋ |
| ಕಾರ್ಕಾನಹಳ್ಳಿ ... | ಕಾರ್ಕಾನಹಳ್ಳಿ |
| ಕೃಷ್ಣನಾಗರ ... | ಆನೇಕಲ್ಲು |
| ಒಳಗೆರೆ ಕಲ್ಲಹಳ್ಳಿ ... | ಡಿಟೋ |
| ಚಿನ್ನಗಂಗಪ್ಪನ ಪಾಳ್ಯ ... | ನೆಲಮಂಗಲ |
| ದೊಡ್ಡಚನ್ನೆಹಳ್ಳಿ ... | ಡಿಟೋ |
| ಬಿನ್ನಮಂಗಲ ... | ಡಿಟೋ |
| ಜಕ್ಕಸಂದ್ರ ... | ಡಿಟೋ |
| ತಾವರೆಕೆರೆ ... ... | ವಾಗಡಿ |
| ಸೂಳಿವರ ... | ಡಿಟೋ |

ತಾರೀಖು 22ನೆ ಜನವರಿ 1907.

ನಂ. 6522—ಸ್ಯಾನಿಟರಿ 134-06-8, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬ್ರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವದು.

| ಸ್ಥಳ. | ತಾಲ್ಲೂಕು. |
|---|---|
| ಮ್ಯಾಲನಹಳ್ಳಿ ... ... | ಚಿಕ್ಕನಾಯಕನಹಳ್ಳಿ. |

ತಾರೀಖು 22ನೆ ಜನವರಿ 1907.

ನಂ. 6524—ಸ್ಯಾ. 57-06-4, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ :—

| ಜಾತ್ರೆಯ ಹೆಸರು. | ನಡೆಯುವ ಸ್ಥಳ. | ತಾಲ್ಲೂಕು. | ತಾರೀಖು | |
|---|---|---|---|---|
| | | | ಇಂದ | ಗೆ |
| 1. ವೀರಭದ್ರದೇವರ ಜಾತ್ರೆ | ಕೋಟೆಗುಡ್ಡ ... | ಜಗಲೂರು ... | 28—2—07 | 2—3—07 |
| 2. ಚಾಡಮ್ಮನ ಜಾತ್ರೆ ... | ಗುರುಸಿದ್ದಾಪುರ ... | ಡಿಟೋ ... | 27—2—07 | 2—3—07 |
| 3. ರಂಗನಾಥ ದೇವರ ಜಾತ್ರೆ ... | ತಾರೆಹಳ್ಳಿ ... | ಡಿಟೋ ... | 25—2—07 | 28—2—07 |

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.